ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 19th July 1972/Ashadha 28, 1894 (Saka Era).

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

T. A. P. C. M. Societies engaged in Cotton Trade

209. Sri C. N. PATIL (Lingsugur).—

Will the Minister for Co-operation be pleased to state :—

(*a*) the number of Taluk Agricultural Produce Co-operative Marketing Societies which are active and inactive throughout the State (Districtwise) and of which the number of Marketing Societies (T. A. P. C. M. S.) engaged in cotton trade (engaged by Cotton Corporation of India) ;

(*b*) the total quantity of cotton purchased from the concerned societies on behalf of the Cotton Corporation of India and its value in rupees ?

Sri A. SHANKARA ALVA (Minister for Co-operation).—

(*a*) Active T. A. P. C. M. Ss.	...	176
Inactive T. A. P. C. M. Ss.	...	1

(Districtwise statement is appended)

45 societies are engaged in cotton trade of which 8 T. A. P. C. M. Ss. are engaged by the Cotton Corporation of India.

(SRI A SHANKARA ALVA)

(*b*) 79,142 quintals up to 31st May, 1972 value being Rs. 1,85,74,937.

STATEMENT

Sl. No.	Name of the District	No. of Marketing Societies that are	
		Active	Inactive
1	Bangalore ...	11	...
2	Tumkur ...	10	...
3	Kolar ...	11	...
4	Chitradurga ...	9	...
5	Shimoga ...	9	...
6	Mysore ...	11	...
7	Hassan ...	8	...
8	Coorg ...	3	...
9	Chickmagalur ...	7	...
10	Mandya ...	7	...
11	South Kanara ...	8	...
12	Gulbarga ...	9	1
13	Raichur ...	9	...
14	Bidar ...	5	...
15	Bellary ...	8	...
16	Dharwar ...	19	...
17	Belgaum ...	10	...
18	Bijapur ...	11	...
19	North Kanara ...	11	...
	Total ...	176	1

ಶ್ರೀ ಸಿ. ಎನ್. ಪಾಟೀಲ್.—ಭಾರತದ ಅರಳೆ ಸಂಸ್ಥೆಯ ಪರವಾಗಿ ಇರುವ ಮಾರ್ಕೆಟಿಂಗ್ ಸೊಸೈಟಿಗಳು ಪ್ರತಿಯೊಂದು ಜಿಲ್ಲೆಯಲ್ಲೂ ಅರಳೆಯನ್ನು ಖರೀದಿ ಮಾಡಿವೆಯೇ? ಅವರು ಖರೀದಿ ಮಾಡಿರುವ ಒಟ್ಟು ಅರಳೆ ಎಷ್ಟು ಮತ್ತು ಹಣ ಎಷ್ಟು ಎನ್ನುವುದೆನ್ನು ತಿಳಿಸುತ್ತೀರಾ? ಮತ್ತು ಆ ಸೊಸೈಟಿಗಳು ಯಾವುವು?

ಶ್ರೀ ಎ. ಶಂಕರ ಆಳ್ವ.—ಭಾರತದ ಅರಳೆ ಸಂಸ್ಥೆಯ ಪರವಾಗಿ ಇರುವ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳು 79,142 ಕ್ವಿಂಟಾರ್‌ಗಳಷ್ಟು ಅರಳೆ

ಯನ್ನು ಕರೆಕ್ಟ್ ಮಾಡಿದ್ದಾರೆ. ಅದರ ಮೌಲ್ಯ 1,85,74,937-00 ರೂಪಾಯಿಗಳು. ಆ ಸಂಸ್ಥೆಗಳು ಯಾವುವು ಎಂದರೆ ರಾಯಚೂರು, ಗದಗ್, ರೋಣ್, ಹುಬ್ಬಳ್ಳಿ, ಕುಂದಗೋಳ್, ಯಾದಗಿರಿ ಮತ್ತು ಬಳ್ಳಾರಿಯಲ್ಲರುವುವು.

ಶ್ರೀ ಸಿ. ಎನ್. ಪಾಟೀಲ್.—ರಾಯಚೂರು ಪ್ಯಾಪರ್‌ನಲ್ಲಿ ತಾಲ್ಲೂಕು ಮಾರ್ಕೆಟಿಂಗ್ ಕೋ ಆಪರೇಟೀವ್ ಸೊಸೈಟಿ ಒಂದಕ್ಕೆ ಮಾತ್ರ ಏಜೆನ್ಸಿ ಕೊಟ್ಟಿದ್ದಾರೆ. ಆ ಜಿಲ್ಲೆ ಹತ್ತಿ ಬೆಳೆಯುವ ಪ್ರದೇಶವಾದ್ದರಿಂದ ಉಳಿದ ತಾಲ್ಲೂಕುಗಳಿಗೆ ಏತಕ್ಕೆ ಏಜನ್ಸಿ ಕೊಡಲಲ್ಲ?

ಶ್ರೀ ಎ. ಶಂಕರ ಆಳ್ವ.—ಒಟ್ಟು 45 ಸೊಸೈಟಿಗಳು ಈ ಅರಳೆ ವ್ಯಾಪಾರದ ವ್ಯವಹಾರದಲ್ಲಿ ತೊಡಗಿವೆ. ಅದರಲ್ಲಿ 8 ಸೊಸೈಟಿಗಳಲ್ಲಿ ಮಾತ್ರ ಕಾಟನ್ ಕಾರ್ಪೊರೇಷನ್ ಮುಖಾಂತರ ಖರೀದಿ ಮಾಡುತ್ತಾರೆ. ಒಟ್ಟು 45 ಸೊಸೈಟಿಗಳು 5 ಕೋಟಿ 19 ಲಕ್ಷ 7 ಸಾವಿರ ಚಿಲ್ಲರೆಯಷ್ಟು ಅರಳೆ ಖರೀದಿ ಮಾಡಿವೆ.

ಶ್ರೀ ಬಾಪೂಗೌಡ ರಾಯಪ್ಪ.—ರಾಯಚೂರು, ಗುಲ್ಬರ್ಗ ಮತ್ತು ಧಾರವಾರ ಈ ಮೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಹತ್ತಿ, ಬೆಳೆಯುತ್ತಿದ್ದಾರೆ. ಅದರೆ ಕಾಟನ್ ಕಾರ್ಪೊರೇಷನ್ ಮುಖಾಂತರ ಸೊಸೈಟಿಯವರು ಖರೀದಿ ಮಾಡಿರುವುದು 1,85,74,937-00 ರೂ. ಗಳು ಇನ್ನೂ ಬೇಕಾದಷ್ಟು ಹತ್ತಿ ಉಳಿದಿದೆ. ಆದುದರಿಂದ ಕಾಟನ್ ಕಾರ್ಪೊರೇಷನ್‌ನವರು ಹೆಚ್ಚು ಪ್ರಮಾಣದಲ್ಲಿ ಹತ್ತಿಯನ್ನು ಖರೀದಿ ಮಾಡುವುದಕ್ಕೆ ವ್ಯವಸ್ಥೆಯನ್ನು ಏತಕ್ಕೆ ಮಾಡಲಲ್ಲಾ?

ಶ್ರೀ ಎ. ಶಂಕರ ಆಳ್ವ.—ಅವರು ಈಸಾರಿ ಪ್ರಥಮವಾಗಿ ಶುರು ಮಾಡಿದ್ದಾರೆ. ಅವರು ಶುರು ಮಾಡಿರುವುದು ಸ್ವಲ್ಪ ತಡವಾಗಿದೆ. ಅವರು 23-6-1972 ರಲ್ಲಿ ಒಂದು ಸಭೆ ಸೇರಿ ಇನ್ನು ಮುಂದಕ್ಕೆ ಎಲ್ಲಾ ಸೊಸೈಟಿಗಳ ಮುಖಾಂತರ ಹತ್ತಿಯನ್ನು ಖರೀದಿ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, 45 ಸಂಘಗಳು ಅರಳೆ ವ್ಯಾಪಾರದಲ್ಲಿ ತೊಡಗಿದ್ದು ಅವುಗಳ ಪೈಕಿ 8 ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರುಕಟ್ಟೆ ಸಂಘಗಳಿಗೆ ಕೇಂದ್ರ ಸರ್ಕಾರದವರು ಮಾನ್ಯತೆ ಕೊಟ್ಟಿದ್ದಾರೆ ಮತ್ತು ಅದರಲ್ಲಿ ವ್ಯಾಪಾರ ಆಗುತ್ತದೆ ಎಂದು ಹೇಳಿದಿರಿ. ಆದರೆ ಎಲ್ಲಾ ಅರಳೆಯನ್ನೂ ಅವರೇ ಏತಕ್ಕೆ ತೆಗೆದುಕೊಳ್ಳಬಾರದು?

ಶ್ರೀ ಎ. ಶಂಕರ ಆಳ್ವ.—ಕಾಟನ್ ಕಾರ್ಪೊರೇಷನ್ನಿನವರು 8 ಸೊಸೈಟಿಗಳ ಮುಖಾಂತರ ಅವರಾಗಿಯೇ ಬಂದು ಖರೀದಿ ಮಾಡಿದ್ದಾರೆ. ಆರೀತಿ ಅವರು ಖರೀದಿ ಮಾಡಿರುವುದು 79,142 ಕ್ವಿಂಟಾರ್‌ಗಳು, ಅದರ ಮೌಲ್ಯ 1,85,74,937-00 ರೂ. ಗಳು.

ಶ್ರೀ ಸಿ. ಎನ್. ಪಾಟೀಲ್.—ನಮ್ಮ ಕೋಆಪರೇಟೀವ್ ರಿಜಿಸ್ಟ್ರಾರ್‌ರವರು ಒಂದು ಸರ್ಕ್ಯುಲರ್‌ನ್ನು ಇಷ್ಯೂ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಅದು ಏನೆಂದರೆ ಉಳಿದಂಥ ಅರಳೆಯನ್ನು ಕಾಟನ್ ಕಾರ್ಪೊರೇಷನ್‌ನವರು ಮಾನ್ಯತೆ ಮಾಡಿರುವ ಕಮಿಷನ್ ಏಜನ್ಸಿ ಮುಖಾಂತರ ತೆಗೆದುಕೊಳ್ಳಬೇಕು, ಬೇರೆ ಯಾರಿಂದಲೂ ತೆಗೆದುಕೊಳ್ಳಕೂಡದು ಎಂದು ಇದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಶಂಕರ ಆಳ್ವ.—ಆ ಸರ್ಕ್ಯುಲರ್ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ.

Sri B. B. SAYANAK.—There are 176 active T.A.P.C.M.Ss in the State. Out of these how many are running in profit and how many are running in loss?

Sri A. SHANKAR ALVA.—I cannot give the figures off hand.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—45 ಸಂಘಗಳಲ್ಲಿ ಈ ಅರಳೆ ವ್ಯಾಪಾರ ನಡೆಯುತ್ತಾ ಇದೆ ಎಂದು ಹೇಳಿದ್ದೀರಿ. ಆದರಲ್ಲಿ ಎಲ್ಲಾ ಸೊಸೈಟಿಗಳೂ ಸೇರಿ ಎಷ್ಟು ಕ್ವಿಂಟಾರ್ ಅರಳೆಯನ್ನು ಖರೀದಿ ಮಾಡಿದ್ದಾರೆ ಎನ್ನುವ ಅಂಕಿನಂಶ್ಯೆಗಳನ್ನು ಕೊಡುತ್ತೀರಾ?

ಶ್ರೀ ಎ. ಶಂಕರ ಆಳ್ವ.—ಎಲ್ಲಾ 45 ಸೊಸೈಟಿಗಳೂ ಸೇರಿ ಒಟ್ಟು 2,24,242 ಕ್ವಿಂಟಾರ್ ನಷ್ಟು ಖರೀದಿ ಮಾಡಿದ್ದಾರೆ. ಆದರಲ್ಲಿ ಕಾರ್ಪೊರೇಷನ್ ಮಾನ್ಯತೆ ಪಡೆದಿರುವ 8 ಸೊಸೈಟಿಗಳಲ್ಲಿ 79,142 ಕ್ವಿಂಟಾರ್‌ಗಳಷ್ಟು ಅರಳೆ ಖರೀದಿಯಾಗಿದೆ. ಅದರ ಮೌಲ್ಯ 1,85,74,937-00 ರೂಪಾಯಿಗಳು.

ಶ್ರೀ ಶರಣಪ್ಪ.—ಕಾಟನ್ ಕಾರ್ಪೋರೇಷನ್ ಮಾನ್ಯತೆ ಪಡೆದಿರುವ ಮಾರ್ಕೆಟಿಂಗ್ ಸೊಸೈಟಿಗಳು ಏನು ಅರಳೆಯನ್ನು ಖರೀದಿ ಮಾಡುತ್ತಿದ್ದಾರೋ ಅವರಿಗೆ ಫೈನಾನ್ಸ್ ಯಾರು ಕೊಡುತ್ತಾರೆ ?

ಶ್ರೀ ಎ. ಶಂಕರ ಆಳ್ವ.—ಕಾಟನ್ ಕಾರ್ಪೋರೇಷನ್ ಮಾನ್ಯತೆ ಪಡೆದಿರುವ 8 ಸೊಸೈಟಿಗಳು ಅವರೇನೇ ಪ್ರತಿವರ್ಷವೂ ಬಂದು ದುಡ್ಡು ಹಾಕಿ ಅರಳೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಆರೀತಿ ಅವರು ಒಪ್ಪಂದ ಮಾಡಿಕೊಂಡಿದ್ದಾರೆ.

Diploma holder (Local Candidates) working in Upper Krishna Project

278. Sri BAPU GOWDA RAYAPPA (Shahapur).—

Will the Minister for Public Works and Electricity be pleased to state :—

(*a*) the number of diploma holders working on daily wage basis and as local candidates in Upper Krishna Prjoect ;

(*b*) since when they are working there ;

(*c*) when their services will be regularised and made permanent ?

Sri H. M. CHANNABASAPPA (Minister for Public Works).—

(*a*) (i)	Daily wage basis	...	14
(ii)	Local candidates	...	13

(*b*) (i) Diploma holders on daily wages are working for the period ranging from 1 to 2 years.

(ii) Diploma holders as local candidates are working for 10 to 12 years.

(*c*) (i) Diploma holders on daily wages are not eligible for regularisation of their services under the existing orders.

(ii) The services of Diploma holders working as local candidates are being regularised by the Chief Engineer (C & B).

ಶ್ರೀ ಬಾಪೂಗೌಡ ರಾಯಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡುವ ಡಿಪ್ಲೊಮಾದಾರರು ಸಾವಿರಾರು ಜನರಿದ್ದಾರೆ. ಅಂಥವರ ಸರ್ವಿಸ್ ಯಾವಾಗ ರೆಗ್ಯುಲರೈಸ್ ಮಾಡುತ್ತೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿರುವವರು ಮಾನ್ಯ ಸದಸ್ಯರು ಹೇಳುವಂತೆ ಸಾವಿರಾರು ಜನರಿಲ್ಲ. 14 ಜನ ಮಾತ್ರ ಇರತಕ್ಕದ್ದು.

ಶ್ರೀ ಬಾಪೂಗೌಡ ರಾಯಪ್ಪ.—ಸ್ಥಳೀಯ ಅಭ್ಯರ್ಥಿಗಳಾಗಿ 10–12 ವರ್ಷದಿಂದ ಡಿಪ್ಲೊಮಾದಾರರು ಕೆಲಸ ಮಾಡುತ್ತಿದ್ದಾರೆ. ಅವರ ಸರ್ವಿಸ್ ಮತ್ತು ಪೇಸ್ಕೇಲ್ ರೆಗ್ಯುಲರೈಸ್ ಮಾಡಿಲ್ಲ, ಮುಂದೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹಾಗೆ ರೆಗ್ಯುಲರೈಸ್ ಮಾಡುವ ಕಾಲಕ್ಕೆ ಅವರ ಪೇಸ್ಕೇಲ್, ಸರ್ವಿಸ್ ಮುಂತಾದುವನ್ನೆಲ್ಲ ಗಣನೆಗೆ ತೆಗೆದುಕೊಳ್ಳಲಾಗುತ್ತದೆಯೇ ?

† Indicates that the remarks or speeches have not been revised by the member concerned.